# ಮೂರು ಬಾರಿ ನಾಯಕ ಪಾತ್ರ ಕೈ ತಪ್ಪಿದೆ

## ರಕ್ಷಿತ್ ಎನ್.
### ಉದಯದ 'ಕಾದಂಬರಿ'ಯ ದಿಗಂತ್ ಚಕ್ರವರ್ತಿ



**◆ ನಟರಾದ ನಂತರ ಜೀವನದಲ್ಲಿ ಆದ ಬದಲಾವಣೆ ಏನು?**

ಅಭಿನಯ ರಂಗ ಎನ್ನುವುದು ದೊಡ್ಡ ಸಾಗರ. ಇಲ್ಲಿ ತುಂಬ ಕಲಿಯಬೇಕು; ನಿರಂತರ ಈಜಬೇಕು ಎನ್ನುವುದನ್ನು ಅರ್ಥ ಮಾಡಿಕೊಂಡಿದ್ದೇನೆ. ಹಂಸಲೇಖ ಅವರ ಸಂಸ್ಥೆಯಲ್ಲಿ ಅಧ್ಯಯನ ಕೈಗೊಂಡಿದ್ದೇನೆ. ಈ ಕೆಲಸದಲ್ಲಿ ನೆಮ್ಮದಿಯಿಂದ, ತುಂಬ ಖುಷಿಯಾಗಿ ಇದ್ದೇನೆ.

**◆ ಟೀವಿಯಲ್ಲಿ ನಟನೆಯನ್ನು ಆರಂಭಿಸಿದ್ದು ಹೇಗೆ?**

'ಗುಂಡ್ಯಾನ ಹೆಂಡ್ತಿ'ಗೆ ನಾಯಕ ಆಗಬೇಕಿತ್ತು. ಆ ಪಾತ್ರಕ್ಕಾಗಿಯೇ ಆಯ್ಕೆಯನ್ನು ಮಾಡಿಕೊಂಡಿದ್ದರು. ಎರಡು ದಿನ ಚಿತ್ರೀಕರಣ ಮಾಡಲಾಗಿತ್ತು. ಪಾತ್ರಕ್ಕೆ ಸೂಕ್ತ ಆಗುವುದಿಲ್ಲ. ತುಂಬ ತೆಳ್ಳಗೆ ಇದ್ದಾನೆ ಎಂದು ಪಾತ್ರ ಬದಲಿಸಿದರು. ನಂತರ ನನಗೆ ಬೇರೆ ಪಾತ್ರ ಕೊಟ್ಟರು. ನಾಯಕನ ಗೆಳೆಯನ ಪಾತ್ರ ಮಾಡಬೇಕಾಗಿ ಬಂತು. ಇದು ಒಂದು ಅನುಭವ ನೋಡೋಣ ಎಂದು ಹೊಸ ಪಾತ್ರವನ್ನು ಮುಂದುವರಿಸಿದೆ. ಅದಾದ ಮೇಲೆ ಝೀ ಕನ್ನಡದಲ್ಲಿ 'ಬ್ರಹ್ಮಗಂಟು'ನಲ್ಲಿ ನಾಯಕನ ಪಾತ್ರಕ್ಕೆ ಆಯ್ಕೆ ಆದೆ. ಗೀತಾಳ ಪತಿಯಾಗಿ ಸೂಕ್ತ ಆಗುತ್ತಿಲ್ಲ ಅಂದ್ರು. ಕೊನೆಗೆ ಗೀತಾಳ ತಮ್ಮನ ಪಾತ್ರ ಮಾಡಿದೆ. ಇದರ ನಂತರ 'ಮುದ್ದುಲಕ್ಷ್ಮಿ'ಯಲ್ಲಿ ಮಾಡುತ್ತಿದ್ದೇನೆ. ಅದರಲ್ಲೂ ನಾಯಕನಾಗಿ ಆಯ್ಕೆ ಆಗಿದ್ದೆ. ವೈದ್ಯನ ಪಾತ್ರಕ್ಕೆ ಮೂವತ್ತು ವರ್ಷ ದಾಟಿದಂತೆ ಕಾಣಬೇಕಿತ್ತಂತೆ. ನಾನು ಹಾಗೆ ಕಾಣಿಸುತ್ತಿಲ್ಲ ಎಂದು ನಾಯಕನ ತಮ್ಮನ ಪಾತ್ರ ಕೊಟ್ಟರು. ಹೀಗೆ ಮೂರು ಧಾರಾವಾಹಿಗಳಲ್ಲಿ ನಾಯಕನಾಗಿ ಆಯ್ಕೆಯಾಗಿ ಎರಡನೇ ನಾಯಕನಾಗಿ ಮಾಡಿದ್ದೇನೆ. ಉದಯದ 'ಕಾದಂಬರಿ'ಯಲ್ಲಿ ನಾಯಕನಾಗಿ ಮಾಡುತ್ತಿದ್ದೇನೆ.

**◆ ಅವಕಾಶಗಳು ಕೈ ತಪ್ಪಿದ ಸಂದರ್ಭ ಎದುರಿಸಿದ ಬಗೆ ಹೇಗಿತ್ತು?**

ಆಸೆಯಿಂದ ಆಡಿಷನ್ ನೀಡಿ ಪಾತ್ರವನ್ನು ಪಡೆದಿರುತ್ತಿದ್ದೆ. ಆ ಖುಷಿಯನ್ನು ಅನುಭವಿಸುತ್ತಿದ್ದಾಗಲೇ ಪಾತ್ರವನ್ನು ಕಳೆದುಕೊಂಡಿರುತ್ತಿದ್ದೆ. ಅದರಿಂದ ಬೇಸರ ಅನ್ನುವುದು ಸಹಜವಾಗಿ ಕಾಡುತ್ತಿತ್ತು. ಮೊದಲ ಬಾರಿ ನಿರಾಕರಿಸಿದಾಗ ಚಿತ್ರೀಕರಣ ಹೇಗೆ ಮಾಡ್ತಾರೆ ನೋಡೋಣ ಎಂದು ಒಪ್ಪಿಕೊಂಡೆ. ಅದುವರೆಗೆ ನಾನು ಚಿತ್ರೀಕರಣ ಕಂಡಿರಲಿಲ್ಲ. ಎರಡನೇ ಬಾರಿ ಪರ್ವಾಗಿಲ್ಲ ಇದನ್ನು ನೋಡೋಣ ಎನ್ನುವ ಭಾವದಲ್ಲೇ ನನಗೆ ನಾನೇ ಸಮಾಧಾನ ಮಾಡಿಕೊಂಡು ಸಿದ್ಧನಾದೆ. ಮುಂದೆ ಇದೇ ದೊಡ್ಡ ಅವಕಾಶಕ್ಕೆ ಕಾರಣ ಆಗಬಹುದು ಎಂದು ಯೋಚಿಸಿದೆ. ಮೂರನೇ ಅವಕಾಶ ನನ್ನ ಅದೃಷ್ಟದ ಬಾಗಿಲನ್ನು ತೆರೆಯಿತು. ಪಾತ್ರವೂ ಗಟ್ಟಿಯಾಗಿತ್ತು. ಅದರ ಮೂಲಕವೇ ಅವಕಾಶಗಳು ಹಲವು ಸಿಕ್ಕವು. ಕೋವಿಡ್ ಕಾರಣಕ್ಕೆ ಹೊಸ ಅವಕಾಶ ಒಪ್ಪಲು ಸಾಧ್ಯ ಆಗಲಿಲ್ಲ. ಮುಂದೆ ಅವಕಾಶ ಸಿಕ್ಕೇ ಸಿಗುತ್ತವೆ ಎನ್ನುವ ವಿಶ್ವಾಸ ಇದೆ. ಕಿರುತೆರೆ ಆಗದಿದ್ದರೆ ಸಿನಿಮಾದಲ್ಲಾದರೂ ಒಳ್ಳೆಯ ನಾಯಕ ನಟನ ಪಾತ್ರ ಮಾಡುತ್ತೇನೆ. ಆಗುವುದೆಲ್ಲ ಒಳ್ಳೆಯದಕ್ಕೆ ಎಂದು ಸಾಗುತ್ತಿದ್ದೇನೆ.

**◆ ಈ ಕ್ಷೇತ್ರದಲ್ಲಿ ನಿಮಗೆ ನೆಲೆ ಊರುವ ವಿಶ್ವಾಸ ಮೂಡಿದ್ದು ಹೇಗೆ?**

ಪಿಯುಸಿಯಲ್ಲೇ ಅಭಿನಯದ ಕನಸುಕಂಡಿದ್ದೆ. ಹೇಗೆ ಹೋಗಬೇಕು ಎನ್ನುವ ದಾರಿಗಳು ಗೊತ್ತಿರಲಿಲ್ಲ. ಒಮ್ಮೆ ದೂರದರ್ಶನದ ಚಂದನದಲ್ಲಿ ಹಂಸಲೇಖ ಅವರ ಕಾಲೇಜಿನ ಬಗ್ಗೆ ಬಂದಿತ್ತು. ಅವರು ಮೈಸೂರು ವಿವಿಯಿಂದ ಪದವಿ ಪರೀಕ್ಷೆ ಕೊಡಿಸುವ ಪ್ರಕಟಣೆ ನೀಡಿದ್ದರು. ಅಭಿನಯದ ಕಲಿಕೆಗೆ ಕಾಯುತ್ತಿದ್ದ ನನಗೆ ಒಳ್ಳೆಯ ಅವಕಾಶ ಎಂದು ನಿರ್ಧರಿಸಿದೆ. ಮನೆಯಲ್ಲಿ ಹೇಳದೆ ಕೇಳದೆ ಆಡಿಷನ್ ನೀಡಿದೆ. ಐದು ನೂರಕ್ಕೂ ಹೆಚ್ಚು ಆಕಾಂಕ್ಷಿಗಳು ಬಂದಿದ್ದರು. 52 ಮಂದಿಯನ್ನು ಆಯ್ಕೆ ಮಾಡಿದರು. ನಾನೂ ಅದರಲ್ಲಿ ಒಬ್ಬನಾಗಿದ್ದೆ. ಅಲ್ಲಿ ಇಂಗ್ಲಿಷ್– ಕನ್ನಡ ಭಾಷಾ ಪತ್ರಿಕೆ ಹೊರತಾಗಿ, ಡಾನ್ಸ್, ರಂಗಭೂಮಿ, ಸಂಗೀತ, ಸಿನಿಮಾ ಪಠ್ಯದ ಭಾಗವಾಗಿತ್ತು. ಅದರಲ್ಲೂ ಬೇರೆ ಬೇರೆ ದೇಸಿ ಕಲಾಪ್ರಕಾರವನ್ನೂ ಕಲಿಸುತ್ತಿದ್ದರು. ಇದರ ಜೊತೆ ರೂಪಾಂತರ ತಂಡದಲ್ಲಿ ಗುರುತಿಸಿಕೊಂಡೆ. ಏಳೆಂಟು ನಾಟಕದಲ್ಲಿ ನೂರಾರು ಶೋ ಮಾಡಿದ್ದೇನೆ. ಡಿಗ್ರಿ ಮುಗಿಯುತ್ತಿದ್ದ ಹಾಗೆ ಆಡಿಷನ್ ಮೂಲಕವೇ ನಟನೆಗೆ ಅವಕಾಶವನ್ನು ಪಡೆದುಕೊಂಡೆ.

**◆ ಕಾದಂಬರಿಯಲ್ಲಿ ನಿಮ್ಮ ಪಾತ್ರದ ಮಹತ್ವದ ಬಗ್ಗೆ**

ದಿಗಂತ್ ಚಕ್ರವರ್ತಿ ಇಂತಹ ಪಾತ್ರವನ್ನು ಮೊದಲು ಮಾಡಿರಲಿಲ್ಲ. ಅವರ ಅಪ್ಪ ದೊಡ್ಡ ಗಾರ್ಮೆಂಟ್ ಉದ್ಯಮಿ. ಅದರಲ್ಲಿ ಅವನೇ ಕೆಲಸಕ್ಕೆ ಸೇರಿರುತ್ತಾನೆ. ಅವರ ಅಪ್ಪನಿಗೆ ಅದು ಗೊತ್ತಿರುವುದಿಲ್ಲ. ಎಲ್ಲ ಸಮಯದಲ್ಲೂ ತನ್ನ ತಂದೆಯ ಹತ್ತಿರ ಏನೋ ಮುಚ್ಚಿಡುತ್ತಾನೆ. ಅವರ ತಾತ ನಾಣಿ. ತಾತ ಮತ್ತು ಅವನು ಪರಮಾಪ್ತ ಗೆಳೆಯರಂತೆ ಕಾಣಿಸಿಕೊಳ್ಳುತ್ತಾರೆ. ಇಬ್ಬರ ನಡುವಿನ ಸಂಭಾಷಣೆ ತುಂಬ ಚೆನ್ನಾಗಿರುತ್ತದೆ. ಕಾದಂಬರಿ ಜೊತೆ ವಿನೋದದಿಂದ ನಡೆದುಕೊಳ್ಳುತ್ತಾನೆ. ಅಂತೆಯೇ ಕಂಪನಿಯಲ್ಲಿ ಗತ್ತಿನಿಂದಲೂ ವ್ಯವಹರಿಸುತ್ತಾನೆ. ಈ ಪಾತ್ರದಲ್ಲಿ ಮುಗ್ಧತೆ ಇದೆ. ತಾಯಿಯ ಕೊರಗು ಇದೆ. ತನ್ನ ತಾಯಿಯ ಬಗ್ಗೆ ತಿಳಿದುಕೊಳ್ಳುವ ತವಕವಿದೆ. ಕಾದಂಬರಿಯ ಜೊತೆ ಈಗಷ್ಟೇ ಪ್ರೇಮಾಂಕುರವಾಗಿದೆ. ನಟನೆಯ ವಿಷಯಕ್ಕೆ ಬಂದರೆ ಪಾತ್ರ ಹೆಚ್ಚಿನ ಶ್ರಮ ಬಯಸುತ್ತದೆ. ಆ ಕಾರಣಕ್ಕೆ ಹೆಚ್ಚು ಇಷ್ಟ ಆಗುತ್ತದೆ.

■ ರಾಘವೇಂದ್ರ ಕೆ.